# ಚೋಟು ಮೆಣಸಿನಕಾಯಿ!

■ ಮಹತಿ

ಎಣ್ಣೆಗೆಂಪು ಬಣ್ಣ. ಎಣ್ಣೆಯೊತ್ತಿ ಮುಂದಕ್ಕೆ ಬಾಚಿದಂತೆ ಕಾಣಿಸುವ ಕೂದಲು. ಆ ಕೂದಲ ಕೆಳಗೆ ಹಣೆಯನ್ನು ಅಲಂಕರಿಸಿರುವ ಭಂಡಾರ. ಜೀವಕೊಳಗಳಂತೆ ಕಾಣಿಸುವ, ಅಪಾರ ಆತ್ಮವಿಶ್ವಾಸವನ್ನು ಸ್ಫುರಿಸುವ ಕಣ್ಣುಗಳು. ತುಟಿಗಳ ಮೇಲಿನ್ನೂ ಮೂಡದ ಮೀಸೆಗಪ್ಪು. ಹದಿನಾರರ ಈ ಹುಡುಗನನ್ನು ನೋಡಿದರೆ, ಪಕ್ಕದ ಮನೆಯ ಹೈಸ್ಕೂಲು ಹುಡುಗ ನೆನಪಾಗಬೇಕು. ಈ ಹುಡುಗನ ಹೆಸರು ಆರ್. ಪ್ರಜ್ಞಾನಂದ. ಭಾರತೀಯ ಚೆಸ್‌ನ ಹೊಸ ಸಂಚಲನ.

'ಪ್ರಗ್' ಎಂದು ಸ್ನೇಹಿತರಿಂದ ಕರೆಸಿಕೊಳ್ಳುವ ಪ್ರಜ್ಞಾನಂದ ಭಾರತದ ಯುವ ಗ್ರಾಂಡ್ ಮಾಸ್ಟರ್. ಅಷ್ಟು ಹೇಳಿದರೆ ಅವರ ಬಗ್ಗೆ ಏನನ್ನೂ ಹೇಳಿದಂತಾಗುವುದಿಲ್ಲ. ವಿಶ್ವದ ನಂ. 1 ಚೆಸ್ ಆಟಗಾರ, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್‌ರಿಗೆ ಸೋಲುಣಿಸಿದ ಭಾರತದ ಚೋಟು ಮೆಣಸಿನಕಾಯಿ ಎಂದು ಹೇಳಿದರೆ ಪ್ರಜ್ಞಾನಂದನ ಅಗ್ಗಳಿಕೆ ಅರ್ಥವಾದೀತು.

ಐದು ಬಾರಿ ವಿಶ್ವ ಚಾಂಪಿಯನ್ ಕಿರೀಟ ಧರಿಸಿರುವ ಗರಿಮೆ ಕಾರ್ಲ್‌ಸನ್ ಅವರದ್ದು. ಅನೂಹ್ಯ ನಡೆಗಳಿಗೆ ಹಾಗೂ ದಾಳಿಕೋರತನಕ್ಕೆ ಅವರು ಪ್ರಖ್ಯಾತಿ. 'ಏರ್ ಥಿಂಗ್ಸ್ ಮಾಸ್ಟರ್ಸ್ ಆನ್‌ಲೈನ್ ರ‍್ಯಾಪಿಡ್ ಟೂರ್ನಿ'ಯಲ್ಲಿ ತಮಗೆದುರಾದ, ತಮ್ಮ ಅರ್ಧದಷ್ಟು ವಯಸ್ಸಿನ ಹುಡುಗನನ್ನು ನೋಡಿ ಕಾರ್ಲ್ಸ್‌ಸನ್ ಒಳಗೊಳಗೇ ನಕ್ಕಿರಬೇಕು. ಆದರೆ, ಆಟ ರಂಗೇರಿದಂತೆಲ್ಲ ಆ ನಗು ಮಾಯವಾಯಿತು. ಕೇವಲ ಹತ್ತೊಂಬತ್ತೇ ನಡೆಗಳಲ್ಲಿ ಪ್ರಜ್ಞಾನಂದ ಗೆಲುವು ಸಾಧಿಸಿದಾಗ ಕಾರ್ಲ್‌ಸನ್ ಮಾತ್ರವಲ್ಲ, ವಿಶ್ವ ಚದುರಂಗ ಜಗತ್ತೇ ನಿಬ್ಬೆರಗಾಯಿತು, ಭಾರತದ ಪೋರನನ್ನು ಕಣ್ಣರಳಿಸಿ ನೋಡಿತು. ಆ ರಾತ್ರಿ ಕಾರ್ಲ್‌ಸನ್ ನಿದ್ದೆ ಮಾಡಿರಲಿಕ್ಕಿಲ್ಲ; ಪ್ರಜ್ಞಾನಂದ ಮಾತ್ರ ಸಂತೋಷದಿಂದ ಹಾಸಿಗೆಗೆ ಗೆಲುವಿನ ಪಂಚ್ ನೀಡಿದರಂತೆ.

ವಿಶ್ವನಾಥನ್ ಆನಂದ್‌ರ ನಂತರ ಭಾರತದ ಚೆಸ್ ಜಗತ್ತಿನ ಬೆಳ್ಳಿಚುಕ್ಕಿ ಯಾರಾಗಬಹುದು ಎನ್ನುವ ಬಹುದಿನಗಳ ಪ್ರಶ್ನೆಗೆ ಇದೀಗ ಉತ್ತರದಂತೆ ಪ್ರಜ್ಞಾನಂದ ಹಲವರ ಕಣ್ಣಿಗೆ ಕಾಣುತ್ತಿದ್ದಾನೆ. ವಿಶಿಯ ತವರು ತಮಿಳುನಾಡು ಪ್ರಜ್ಞಾನಂದನ ತವರೂ ಹೌದೆನ್ನುವುದು ಕಾಕತಾಳೀಯ.

ಕಾರ್ಲ್‌ಸನ್ ವಿರುದ್ಧದ ಗೆಲುವು ಚದುರಂಗಪ್ರಿಯರಿಗೆ ಅಚ್ಚರಿ ತಂದಿದ್ದರೂ, ಪ್ರಜ್ಞಾನಂದನನ್ನು ಬಲ್ಲವರಿಗೆ ತೀರಾ ಸೋಜಿಗವೇನೂ ಅಲ್ಲ. ಹತ್ತನೇ ವಯಸ್ಸಿನಲ್ಲೇ 'ಇಂಟರ್‌ನ್ಯಾಶನಲ್ ಮಾಸ್ಟರ್' ಪಟ್ಟಕ್ಕೇರಿದ್ದ ಹುಡುಗ, 2018ರಲ್ಲಿ ವಿಶ್ವದ ಎರಡನೇ ಅತಿ ಕಿರಿಯ ಗ್ರಾಂಡ್ ಮಾಸ್ಟರ್ ಎನ್ನಿಸಿಕೊಂಡಿದ್ದ. ಇಂಥ ಹುಡುಗ 'ಏರ್ ಥಿಂಗ್ಸ್ ಮಾಸ್ಟರ್ಸ್ ಆನ್‌ಲೈನ್ ರ‍್ಯಾಪಿಡ್ ಟೂರ್ನಿ'ಯಲ್ಲಿ ವಿಶ್ವ ಚಾಂಪಿಯನ್ ಅನ್ನು ಕಂಗೆಡಿಸಿದ್ದು ತೀರಾ ಅನಿರೀಕ್ಷಿತವೇನಲ್ಲ.

ಭಾರತದ ಚೆಸ್ ಜಗತ್ತೀಗ ಹೊರಳು ಹಾದಿಯಲ್ಲಿದೆ. 2007ರಿಂದೀಚೆಗೆ ರೂಪುಗೊಂಡಿರುವ 20 ಚಾಂಪಿಯನ್‌ಗಳು ಸೇರಿದಂತೆ ಒಟ್ಟು 73 ಗ್ರಾಂಡ್ ಮಾಸ್ಟರ್‌ಗಳು ಭಾರತದ ಚದುರಂಗದ ಕಣದಲ್ಲಿದ್ದಾರೆ. ನಿಹಾಲ್ ಸರಿನ್, ಅರ್ಜುನ್ ಎರಿಗೈಸಿ ಹಾಗೂ ಆನಂದ್‌ರಿಂದ ಭರವಸೆಯ ಆಟಗಾರ ಎಂದು ಕರೆಸಿಕೊಂಡಿರುವ ದೊಮ್ಮರಾಜು ಗುಕೇಶ್ ಸೇರಿದಂತೆ ಇಪ್ಪತ್ತನ್ನು ದಾಟದ ಯುವ ಆಟಗಾರರು ಚೆಸ್ ಅಂಗಳದಲ್ಲಿ ಬೆಳದಿಂಗಳು ಮೂಡಿಸಿದ್ದಾರೆ. ಈ ಸಾಲಿನಲ್ಲೀಗ ಪ್ರಗ್ ಎನ್ನುವುದೊಂದು ಬೆಳ್ಳಿಚುಕ್ಕಿ.

ತನ್ನ ವಯಸ್ಸಿನ ಜಾಣ ಜಾಣೆಯರೆಲ್ಲ ಮೊಬೈಲ್ ಸಂಗದಲ್ಲಿ ಬೆರಳು ಸವೆಸುತ್ತಿರುವಾಗ ಇಲ್ಲವೇ ಎಂಜಿನಿಯರಿಂಗ್ – ಮೆಡಿಕಲ್ ಕಲಿಕೆಯ ಹಂಬಲದಲ್ಲಿ ಮುಳುಗಿರುವಾಗ, ಪ್ರಜ್ಞಾನಂದ ಚದುರಂಗದ ಮನೆಗಳಲ್ಲಿ ಖುಷಿ ಕಾಣುತ್ತಿದ್ದಾನೆ. 'ಎಂಟನೇ ವಯಸ್ಸಿನಲ್ಲಿದ್ದಾಗಲೇ ಚದುರಂಗದ ಹಾಸೇ ತನ್ನ ಭವಿಷ್ಯ ಎನ್ನುವುದರ ಅರಿವು ತಮ್ಮ ಶಿಷ್ಯನಿಗಿತ್ತು' ಎನ್ನುತ್ತಾರೆ, ಪ್ರಗ್ ಏಳು ವರ್ಷದವನಿದ್ದಾಗಿನಿಂದ ತರಬೇತಿ ನೀಡುತ್ತಿರುವ ಆರ್.ಬಿ. ರಮೇಶ್.

ಪ್ರಗ್ ತಂದೆ ರಮೇಶ್‌ಬಾಬು ಬ್ಯಾಂಕ್ ಉದ್ಯೋಗಿ. ಅಮ್ಮ ನಾಗಲಕ್ಷ್ಮಿ ಗೃಹಿಣಿ. ಚೆಸ್ ಟೂರ್ನಮೆಂಟ್‌ಗೆಂದು ಮಗ ಊರು–ದೇಶ ಸುತ್ತಲು ಹೊರಟಾಗಲೆಲ್ಲ ಅಮ್ಮನೇ ಜೊತೆಗಾತಿ. ತಮ್ಮೊಂದಿಗೆ ಕುಕ್ಕರ್ ಕೂಡ ಒಯ್ಯುವ ಅವರು, ಎಲ್ಲಿ ಹೋದರೂ ಮಗನಿಗೆ ತಮಿಳು ಅಡುಗೆಗಳನ್ನು ಮಾಡಿ ಬಡಿಸುತ್ತಾರಂತೆ.

ಪ್ರಗ್‌ನ ಸೋದರಿ ವೈಶಾಲಿ ಕೂಡ ಚೆಸ್ ಚತುರೆ. ಭಾರತೀಯ ಆಟಗಾರ್ತಿಯರ ತಂಡದಲ್ಲಿ ಆಕೆಯೂ ಸ್ಥಾನ ಪಡೆದುಕೊಂಡಿದ್ದಾಳೆ.

ಅಂದಹಾಗೆ, ಚೆಸ್ ಮಾತ್ರವಲ್ಲ – ಟೆನ್ನಿಸ್ ಎಂದರೂ ಪ್ರಗ್‌ಗೆ ಇಷ್ಟ. ಕ್ರಿಕೆಟ್ ಬಗ್ಗೆಯೂ ಸೆಳೆತವಿದೆ. ಚೆನ್ನೈನಲ್ಲಿ ಗೆಳೆಯರೊಂದಿಗೆ ಸೇರಿ ಕ್ರಿಕೆಟ್ ಆಡುವುದಿದೆ. ಟೀವಿಯಲ್ಲಿ ತಮಿಳು ಕಾಮಿಡಿಗಳನ್ನು ನೋಡುವುದೆಂದರೆ ತುಂಬಾ ಇಷ್ಟ. 'ವಿಶಿ'ಯೆಂದರೆ ಪ್ರಗ್‌ಗೆ ಮೆಚ್ಚುಗೆ–ಆದರ್ಶವಷ್ಟೇ ಅಲ್ಲ, ತಾನು ಏರಬೇಕಾದ ಎತ್ತರದ ಅಳತೆಗೋಲೂ ಹೌದು. ಪ್ರಜ್ಞಾನಂದ ಸಾಗುತ್ತಿರುವ ಹಾದಿಯನ್ನು ನೋಡಿದರೆ, ಭಾರತದ ಚದುರಂಗದ ಅಂಗಳದಲ್ಲಿ ಮಿಂಚಿನ ಹೊಳೆ ಹರಿಯುವ ನಿರೀಕ್ಷೆ ಹುಟ್ಟುತ್ತದೆ. ■




Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65